ಎಂ.ವಿ.ಸಿ. 1052/2023
ಪಿ.ಡಬ್ಲ್ಯೂ : 01

ದಿನಾಂಕ ಃ 11-07-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಎಸ್.ಎ ವಕೀಲರಿಂದಃ**

| | |
|---|---|
| ನಿಪಿ-22 | ಇಂಪೇಶಂಟ್ ಬಿಲ್ |
| ನಿಪಿ-23 | ಡಿಸ್ ಚಾರ್ಜ್ ಸಮ್ಮರಿ |
| ನಿಪಿ-24 | ಡಿಸ್ ಚಾರ್ಜ್ ಕಾರ್ಡ್ |
| ನಿಪಿ-25 | Prescription |

ಆದ್ದರಿಂದ ಅರ್ಜಿಯನ್ನು ಪುರಸ್ಕರಿಸಬೇಕಾಗಿ ಕೋರಿಕೆ.

**ಪಾಟೀ ಸವಾಲು - 2 ನೇ ಎದುರುದಾರರ ಪರ ಶ್ರೀ. ಎಂ.ಆರ್ ವಕೀಲರಿಂದಃ**

ಅಪಘಾತದ ದಿನ ನಾನು ನನ್ನ ದ್ವಿಚಕ್ರ ವಾಹವನ್ನು ಚಲಾಯಿಸಿಕೊಂಡು ಹೋಗುತ್ತಿದ್ದೆ . ನನ್ನ ಬಳಿ ದ್ವಿ ಚಕ್ರ ವಾಹನ ಚಲಾಯಿಸಲು ವಾಹನ ಪರವಾನಿಗೆ ಇದೆ . ನನ್ನ ವಾಹನಕ್ಕೆ ಹಿಂಬದಿಯಿಂದ ಬಂದು ಲಾಗಿ ಗುದ್ದಿರುತ್ತದೆ. ಅಪಘಾತಕ್ಕಿಂತ ಮೊದಲು ನಾನು ಲಾರಿಯನ್ನು ನೋಡಿರುವುದಿಲ್ಲ . ಉಡುಪಿಯಿಂದ ಮಂಗಳೂರಿನ ಹೋಗುವ ರಾಷ್ಟ್ರೀಯ ಹೆದ್ದಾರಿ ಇರುತ್ತದೆ . ಅಪಘಾತವಾಗುವ ಸಮಯದಲ್ಲಿ ಸಾಕಷ್ಟು ವಾಹನಗಳು ರಾಷ್ಟ್ರೀಯ ಹೆದ್ದಾರಿಯಲ್ಲಿ ಓಡಾಡುತ್ತಿದ್ದವು ಎಂದರೆ ಸರಿ . ಹಿಂದಿನಿಂದ ವಾಹನವನ್ನು ಗಮನಿಸದೇ ನಾನೇ ಅಪಘಾತಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ . ನನ್ನ ಸಂಪೂರ್ಣ ಚಿಕಿತ್ಸೆ ಕೆ ಎಂಸಿ ಮಣಿಪಾಲ ಆಸ್ಪತ್ರೆ ಮತ್ತು ಹೈ ಟೆಕ್ ಆಸ್ಪತೆಯಲ್ಲಿ ಆಗಿರುತ್ತದೆ . ಕಡೆಯ ಬಾರಿಗೆ ನಾನು ಕೆ ಎಂ ಸಿ ಆಸ್ಪತ್ರೆ ಗೆ 3 ತಿಂಗಳ ಹಿಂದೆ ಹೋಗಿದ್ದೆ . ಕೆ ಎಂ ಸಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಸರಿಯಾಗಲಿಲ್ಲ ಎಂದು ನಾನು ಹೈ ಟೆಕ್ ಆಸ್ಪತ್ರೆಗೆ ಹೋಗಲಿಲ್ಲ ಆದರೇ ನನ್ನ ಕಾಲಿಗೆ ಆಗಿದ್ದ ಗಾಯ ಗುಣವಾಗಿರಲಿಲ್ಲ

ಆದ್ದರಿಂದ ಹೈಟೆಕ್ ಆಸ್ಪತ್ರೆಗೆ ಹೋದೆ . ಕೆ ಎಂ ಸಿ ಆಸ್ಪತ್ರೆ ರವರು ಮುಂದುವರಿದ ಚಿಕಿತ್ಸೆಗೆ ಬರುವಂತೆ ಹೇಳಿರುತ್ತಾರೆ. ಕೆ ಎಂ ಸಿ ಆಸ್ಪತ್ರೆ ಯ ವೈದ್ಯರು ಹೇಳಿದ ಸೂಚನೆಯನ್ನು ನಾನು ಸರಿಯಾಗಿ ಪಾಲಿಸಲಿಲ್ಲ ಎಂದರೆ ಸರಿಯಲ್ಲ . ನಾನು ಅಪಘಾತಕ್ಕೆ ಒಳಪಟ್ಟ ಗಾಯಗಳಿಗೆ ಹೈಟೆಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ ಮತ್ತು ಬೇರೆ ರೋಗಕ್ಕೆ ಹೈ ಟೆಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ ಎಂದರೆ ಸರಿಯಲ್ಲ . ನಾನು ಕೆ ಎಂ ಸಿ ಆಸ್ಪತ್ರೆ ಯಲ್ಲಿ ಒಮ್ಮೆ ಮಾತ್ರ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ . ನಾನು ಮೊದಲನೇ ಬಾರಿಗೆ ಒಳರೊಗಿಯಾಗಿ ಚಿಕಿತ್ಸೆ ಪಡೆಯುವಾಗ ನನ್ನ ಬಲ ಕಾಲನ್ನು ತೆಗೆದಿರುತ್ತಾರೆ .

ನಿಪಿ 19 ನ್ನು ಕೇಸ್ ಗಾಗಿ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ . ನಾನು ಹಾಜರುಪಡಿಸಿರುವಷ್ಟು ಹಣವನ್ನು ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ಬೇರೆಯವರು ನನಗೆ ರೂ 22000 ದಷ್ಟು ಸಹಾಯ ಮಾಡಿರುತ್ತಾರೆ . ಬಿಲ್ಲಿನಲ್ಲಿ ನನಗೆ ಸ್ವಲ್ಪ ಹಣವನುನ ಡಿಸ್ಕೌಂಟ್ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ . ಈಗ ನಾನು ಮುಂದುವರಿದ ಚಿಕಿತ್ಸೆಗಾಗಿ ಹೈಟೆಕ್ ಆಸ್ಪತ್ರೆಗೆ ಹೋಗುತ್ತೇನೆ .ನಾನು ಸಂಪಾದನೆ ಮಾಡುತ್ತಿದ್ದ ಬಗ್ಗೆ ದಾಖಲೆ ಇಲ್ಲ . ಅಪಘಾತ ಸವಯದಲ್ಲಿ ನಾನು ಹೇಳುವಷ್ಟು ಸಂಪಾದನೆ ಇರಲಿಲ್ಲ ಎಂದರೆ ಸರಿಯಲ್ಲ . ಅಪಘಾತದಿಂದ ನನಗೆ ಆರ್ಥಿಕ ನಷ್ಟ ಉಂಟಾಗಿಲ್ಲ ಎಂದರೆ ಸರಿಯಲ್ಲ . ನಿಪಿ 11 ರಂತೆ ಹೇಳಿದಷ್ಟು ನನಗೆ ಅಂಗ ನ್ಯೂನ್ಯತೆ ಇಲ್ಲ ಎಂದರೆ ಸರಿಯಲ್ಲ . ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೇಳಿರುವಂತೆ ವೈದ್ಯಕೀಯ ಖರ್ಚು, ಪೌಷ್ಟಿಕ ಆಹಾರಕ್ಕೆ, ಓಡಾಟಕ್ಕೆ ಪರಿಚಾರಕರಿಗೆ ಖರ್ಚಾಗಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ದೈಹಿಕ ನ್ಯೂನ್ಯತೆ ಇಲ್ಲ ಮತ್ತು ನಾನು ಸಂಪೂರ್ಣ ಆರೋಗ್ಯವಾಗಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ನನ್ನ ತಪ್ಪಿನಿಂದ ಆಗಿರುವ ಕಾರಣ 2 ನೇ ಎದುರುದಾರರು ಯಾವುದೇ ಪರಿಹಾರ ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 12 ಸೃಷ್ಟಿ ಮಾಡಿ ಹಾಜರುಪಡಿಸಿದ ದಾಖಲೆ ಎಂದರೆ ಸರಿಯಲ್ಲ . ನಾನು ಅರ್ಜಿಯನ್ನು

ಕಾಲಮಿತಿ ಒಳಗೆ ಸಲ್ಲಿಸದೇ ಇರುವುದರಿಂದ ನನ್ನ ಅರ್ಜಿ ಊರ್ಜಿತಕ್ಕವಾಗದಲ್ಲ ಎಂದರೆ ಸರಿಯಲ್ಲ .

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಪ್ರ.ಹಿ.ಸಿ.ನ್ಯಾ. ಉಡುಪಿ.